513(1063) : ಶ್ರೀ ಅರಗಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದ ವಿವಿಧ ಹಾಲು ಒಕ್ಕೂಟಗಳು ದಿನನಿತ್ಯ ಸಂಗ್ರಹ ಮಾಡುತ್ತಿರುವ ಹಾಲಿನ ಪ್ರಮಾಣ ಎಷ್ಟು (ಒಕ್ಕೂಟವಾರು ವಿವರ ನೀಡುವುದು);

ಆ) ಹಾಲು ಒಕ್ಕೂಟಗಳು ರೈತರಿಗೆ ನೀಡುತ್ತಿರುವ ದರ ತೀವ್ರ ಕಡಿಮೆ ಇದ್ದು ಹಾಲು ಉತ್ಪಾದಕರು (ನಷ್ಟ ಅನುಭವಿಸುತ್ತಿರುವುದು) ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದಲ್ಲಿ, ಸರ್ಕಾರಿ ತೆಗೆದುಕೊಳ್ಳುವ ಕ್ರಮಗಳೇನು;

ಈ) ಎಷ್ಟು ಹಾಲು ಒಕ್ಕೂಟ, ಹಾಲು ಖರೀದಿ, ಹಾಲು ಮಾರಾಟ ದರಗಳ ವಿವರ ನೀಡುವುದು;

ಉ) ರಾಜ್ಯದಲ್ಲಿ ನಷ್ಟದಲ್ಲಿರುವ ಹಾಲು ಒಕ್ಕೂಟ ಯಾವುವು (ನಷ್ಟದ ವಿವರ ಒಕ್ಕೂಟವಾರು ನೀಡುವುದು)

ಊ) ಒಕ್ಕೂಟಗಳಿಗೆ ನಷ್ಟವಾಗದಿರಲು ಸರ್ಕಾರ ಅವುಗಳಿಗೆ ಸಹಾಯಧನ ನೀಡಲು ಯೋಚಿಸಿದೆಯೇ;

ಋ) ಇತ್ತೀಚೆಗೆ ಹಾಲು ಉತ್ಪಾದನೆ ಜಾಸ್ತಿಯಾಗಿರುವುದರಿಂದ, ರಾಜ್ಯದ ಅಂಗನವಾಡಿಗಳಿಗೆ ಉಚಿತ ಹಾಲನ್ನು ವಿತರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಶ್ರೀ ಆರ್.ವಿ. ದೇಶಪಾಂಡೆ (ಸಹಕಾರ ಸಚಿವರು)

ಅ) ಡಿಸೆಂಬರ್ 2004ರಲ್ಲಿ ಇದ್ದಂತೆ, ಸರಾಸರಿ ದಿನವಹಿ ಹಾಲು ಶೇಖರಣೆ 28,40,691 ಕೆ.ಜಿ.ಗಳು ಇದ್ದು ವಿವರ ಕೆಳಕಂಡಂತೆ ಇದೆ.

ಕ್ರ.ಸಂ.	ಸಹಕಾರ ಹಾಲು ಒಕ್ಕೂಟಗಳ ಹೆಸರು	ಸರಾಸರಿ ದೈನಂದಿನ ಹಾಲು ಶೇಖರಣೆ (ಪರಿಮಾಣ ಕೆ.ಜಿ. ಗಳಲ್ಲಿ)
1.	ಬೆಂಗಳೂರು	763302
2.	ಕೋಲಾರ	711888
3.	ಮೈಸೂರು	174320
4.	ಮಂಡ್ಯ	277406
5.	ತುಮಕೂರು	167379
6.	ಹಾಸನ	219929
7.	ಧಾರವಾಡ	63468

1	2	3
8.	ಬೆಳಗಾವಿ	59306
9.	ಬಿಜಾಪುರ	27697
10.	ಗುಲ್ಬರ್ಗಾ	29843
11.	ದಕ್ಷಿಣ ಕನ್ನಡ	150814
12.	ಶಿವಮೊಗ್ಗ	145490
13.	ಬಳ್ಳಾರಿ	42939
	ಒಟ್ಟು	**2840691**

ಆ) ಗಮನಕ್ಕೆ ಬಂದಿರುವುದಿಲ್ಲ.

ಇ) ಅನ್ವಯಿಸುವುದು.

ಈ) ಒಕ್ಕೂಟವಾರು ಹಾಲು 2004ರಲ್ಲಿ ವಿವರಗಳು (ಪ್ರತಿ ಲೀ.ಗೆ) ಡಿಸೆಂಬರ್ 2004ರಲ್ಲಿದ್ದಂತೆ ಈ ಕೆಳಗಿನಂತೆ ಇದೆ.

ಕ್ರ.ಸಂ.	ಸಹಕಾರ ಹಾಲು ಒಕ್ಕೂಟಗಳ ಹೆಸರು	ಉತ್ಪಾದನೆ ಪಾವತಿಸುವ ಶೇಖರಣೆ ಲಿ.ಗೆ ದರ ರೂಗಳಲ್ಲಿ	ಹಾಲು ಮಾರಾಟ ದರ ಲಿ.ಗೆ ರೂಗಳಲ್ಲಿ
1.	ಬೆಂಗಳೂರು	09.10	13.00
2.	ಕೋಲಾರ	08.80	13.00
3.	ಮೈಸೂರು	08.00	13.00
4.	ಮಂಡ್ಯ	08.20	13.00
5.	ತುಮಕೂರು	08.30	13.00
6.	ಹಾಸನ	07.90	13.00
7.	ಧಾರವಾಡ	08.00	14.00
8.	ಬೆಳಗಾವಿ	27.60	13.60
9.	ಬಿಜಾಪುರ	07.70	13.00
10.	ಗುಲ್ಬರ್ಗಾ	07.90	14.00
11.	ದಕ್ಷಿಣ ಕನ್ನಡ	10.25	13.00
12.	ಶಿವಮೊಗ್ಗ	07.95	13.00
13.	ಬಳ್ಳಾರಿ	08.00	14.00

ಉ) 2003–04ನೇ ಸಾಲಿನಲ್ಲಿ 02 ದಿಕ್ಕೂಟಗಳು ನಷ್ಟ ಅನುಭವಿಸಿರುತ್ತವೆ 2003–04ನೇ ಸಾಲಿನ ಅಂತ್ಯಕ್ಕೆ 05 ಒಕ್ಕೂಟಗಳು ವೆಚ್ಚದಲ್ಲಿದ್ದು ವಿವರ ಕೆಳಗಿನಂತೆ ಇದೆ.

(ರೂ. ಲಕ್ಷಗಳಲ್ಲಿ)

ಕ್ರ.ಸಂ.	ಸಹಕಾರಿ ಹಾಲು ಒಕ್ಕೂಟಗಳ ಹೆಸರು	2003-04ನೇ ಸಾಲಿನ ನಷ್ಟ	ದಿನಾಂಕ 31.3.2000ಕ್ಕೆ ಇದ್ದಂತೆ ಕೂಡಿಬಿದ್ದ ನಷ್ಟ
1.	ಧಾರವಾಡ	98.33	916.48
2.	ಗುಲ್ಬರ್ಗಾ	–	345.74
3.	ಬಿಜಾಪುರ	47.38	1086.87
4.	ಬೆಳಗಾವಿ		331.38
5.	ತುಮಕೂರು	–	118.65

ಊ) ಇಲ್ಲ

ಋ) ಇಲ್ಲ.

514(1064) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಳೆದ ಮತ್ತು ಈ ಸಾಲಿನಲ್ಲಿ ಸ್ತ್ರೀಶಕ್ತಿ ಸ್ವಸಹಾಯ ಗುಂಪುಗಳಿಂದ ಸಹಾಯ ಧನ ಕೋರಿ ಬಂದ ಅರ್ಜಿಗಳು ಎಷ್ಟು;

ಆ) ಇವುಗಳಲ್ಲಿ ಸಹಾಯಧನ ಒದಗಿಸಿದ ಸಂಖ್ಯೆ ಮತ್ತು ಮೊತ್ತವೆಷ್ಟು? ಜಿಲ್ಲಾವಾರು ಶಿವಮೊಗ್ಗ ಜಿಲ್ಲೆಯ ತಾಲ್ಲೂಕುವಾರು ಹಾಗೂ ತೀರ್ಥಹಳ್ಳಿ ತಾಲ್ಲೂಕಿನ ಸ್ವಸಹಾಯ ಗುಂಪುವಾರು ವಿವರ ನೀಡುವುದು.

ಇ) ಸಹಾಯಧನ ವಿತರಿಸಬೇಕಾಗಿರುವ ಅರ್ಜಿಗಳ ಸಂಖ್ಯೆ ಎಷ್ಟು;

ಈ) ಇವುಗಳಿಗೆ ಯಾವಾಗ ಸಹಾಯಧನ ವಿತರಿಸಲಾಗುವುದು?

ಶ್ರೀಮತಿ ಭಾಗೀರಥಿ ಮರುಳ ಸಿದ್ಧನಗೌಡ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು)

ಅ) ಸ್ತ್ರೀಶಕ್ತಿ ಸ್ವಸಹಾಯ ಗುಂಪುಗಳಿಗೆ ಸುತ್ತು ನಿಧಿ ನೀಡಲು ಅರ್ಜಿಗಳು ಅವಶ್ಯಕತೆಯಿರುವುದಿಲ್ಲ. ಎಲ್ಲಾ ಅರ್ಹ ಗುಂಪುಗಳಿಗೆ ಸರ್ಕಾರದಿಂದ ಸುತ್ತು ನಿಧಿಯನ್ನು ಸಹಾಯಧನದ ರೂಪದಲ್ಲಿ ನೀಡಲಾಗುವುದು.

ಆ) 1. ರಚನೆಯಾಗಿರುವ ಎಲ್ಲಾ 1 ಲಕ್ಷ ಗುಂಪುಗಳಿಗೆ ಸುತ್ತು ನಿಧಿಯನ್ನು ನೀಡಲಾಗಿದೆ (ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-1ರಲ್ಲಿ ನೀಡಿದೆ)

2. ಶಿವಮೊಗ್ಗ ಜಿಲ್ಲೆಯಲ್ಲಿ ರಚನೆಯಾಗಿರುವ ಎಲ್ಲಾ 2988 ಗುಂಪುಗಳಿಗೆ ರೂ.149.40 ಲಕ್ಷಗಳ ಸುತ್ತು ನಿಧಿಯನ್ನು ನೀಡಲಾಗಿದೆ.

(ತಾಲ್ಲೂಕುವಾರು ಮಾಹಿತಿಯನ್ನು ಅನುಬಂಧ-2ರಲ್ಲಿ ನೀಡಿದೆ)

3. ತೀರ್ಥಹಳ್ಳಿ ತಾಲ್ಲೂಕಿನಲ್ಲಿ ರಚನೆಯಾಗಿರುವ ಎಲ್ಲಾ 380 ಗುಂಪುಗಳಿಗೆ ಸುತ್ತು ನಿಧಿ ನೀಡಿದೆ.